ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಒಂದು ಕುಟುಂಬದಿಂದ ಪ್ರತ್ಯೇಕವಾಗಿ ಅಡಿಗೆ ಮಾಡಿಕೊಂಡು ವಾಸಿಸುತ್ತಿದ್ದಲ್ಲಿ ಅಂತಹ ಕುಟುಂಬವನ್ನು ಪ್ರತ್ಯೇಕ ಕುಟುಂಬವೆಂದು ಪರಿಗಣಿಸಲಾಗುತ್ತಿದೆ. ಇಲ್ಲದಿದ್ದಲ್ಲಿ ಅದು ಅವಿಭಕ್ತ ಕುಟುಂಬವಾಗಿರುತ್ತದೆ.

ಇ) ಯಾವುದೇ ಕುಟುಂಬಕ್ಕೆ ಅವಿಭಕ್ತ ಕುಟುಂಬ/ ಪ್ರತ್ಯೇಕ ಕುಟುಂಬದ ಬಗ್ಗೆ ವರ್ಗೀಕರಣ ಪಡೆಯುವ ಬಗ್ಗೆ ತೊಂದರೆಗಳಿದ್ದಲ್ಲಿ ಅಂತಹವರ ಕುಂದು ಕೊರತೆಗಳನ್ನು ತಾಲ್ಲೂಕು ಕಛೇರಿಯಲ್ಲಿ ಪರಿಹರಿಸಲಾಗುತ್ತದೆ. ಮನೆ ಮನೆ ಸಮೀಕ್ಷೆ ಕಾರ್ಯದಲ್ಲಿ ಎಲ್ಲಾ ಗ್ರಾಮ ಮತ್ತು ವಾರ್ಡ್‌ಗಳಲ್ಲಿ ವಾಸಿಸುವ ಜನರನ್ನು ಸಮೀಕ್ಷಿಸಲಾಗಿದೆ. ಕಾರಣಾಂತರಗಳಿಂದ ಯಾವುದೇ ವ್ಯಕ್ತಿಯನ್ನು ಸಮೀಕ್ಷೆಯಿಂದ ಕೈಬಿಟ್ಟಲ್ಲಿ ಅಂತಹವರ ಕುಂದು ಕೊರತೆಗಳನ್ನು ಪರಿಹರಿಸಲು ವ್ಯವಸ್ಥೆಯನ್ನು ಮಾಡಲಾಗಿದೆ.

609 (623) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) : ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಿತ್ತೂರಿನ ಎಂ.ಕೆ. ಹುಬ್ಬಳ್ಳಿ ಹತ್ತಿರ ಇರುವ ಮಲಪ್ರಭಾ ನದಿಯಲ್ಲಿ ಶಿಥಿಲಗೊಂಡಿರುವ ಗಂಗಾಂಬಿಕಾ ದೇವಾಲಯವನ್ನು ಸಂರಕ್ಷಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಸದರಿ ದೇವಾಲಯವನ್ನು ಸಂರಕ್ಷಿಸುವ ಸಲುವಾಗಿ ನೀರಾವರಿ ಇಲಾಖೆಯಿಂದ ರೂ. 175.00 ಲಕ್ಷ ಅನುದಾನ ಕೋರಿರುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಅನುದಾನವನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಬಿ. ನಾಗರಾಜ ಶೆಟ್ಟಿ (ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು)

ಅ) ಹೌದು.

ಆ) ಬಂದಿದೆ.

ಇ) ಧಾರ್ಮಿಕ ಸಂಸ್ಥೆಗೆ ಸರ್ಕಾರದಿಂದ ಅನುದಾನ ಕೋರಿಕೆಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ನಕ್ಷೆಯನ್ನು ತಯಾರಿಸಿ, ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿ, ಬೆಳಗಾಂರವರಿಗೆ ಸೂಚಿಸಿದೆ. ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದ ನಂತರ ಅನುದಾನ ಮಂಜೂರು ಮಾಡಲು ನಿಯಮಾನುಸಾರ ಪರಿಶೀಲಿಸಲಾಗುವುದು.